O.S 270/2008
DW-5

**ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 09-04-2019.**

*ಪಾಟೀ ಸವಾಲು ಶ್ರೀ ಜಿ.ವಿ.ವಿ ವಕೀಲರಿಂದ*

ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ನೋಟಿಸ್ಸು ಬಂದಿತ್ತು.ನನ್ನ ತಂದೆ 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ.ನಾನು ಹೊನ್ನೇಗೌಡರ ಮಗ ಎಂಬ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅವಶ್ಯಕತೆ ಇದ್ದರೆ ಹಾಜರುಪಡಿಸುತ್ತೇನೆ.ನಾನು ನನ್ನ ತಂದೆ ಪತ್ರ ಬರೆಯವುದನ್ನು ಹಾಗೂ ಸಹಿ ಮಾಡಿರುವುದನ್ನು ನೋಡಿರುತ್ತೇನೆ.ನನ್ನ ತಂದೆಯ ಬರವಣಿಗೆ ಮತ್ತು ಸಹಿಗಳ ಬಗ್ಗೆ ದಾಖಲೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.ನನ್ನ ತಂದೆ ವಿಲ್ ಗೆ ಸಹಿ ಹಾಕಿರುವುದಾಗಿ ಹೇಳುತ್ತಿದ್ದರು.ನಿಡಿ-1 ರಲ್ಲಿ ನನ್ನ ತಂದೆ ಮಾರೇನಹಳ್ಳಿ ವೆಂಕಟೇಗೌಡರ ಮಗ ಹೊನ್ನೇಗೌಡ ಎಂದು ಬರೆದಿದ್ದಾರೆಯೇ ಎಂದರೆ ಸಾಕ್ಷಿಯು ಬರೆದಿದ್ದಾರೆ ಎಂದು ನುಡಿಯುತ್ತಾರೆ.ಈ ಸಂಬಂಧ ಮೇಲ್ಕಂಡ ಬರವಣಿಗೆಯನ್ನು ರುಜುವತುಪಡಿಸುವ ಸಲುವಾಗಿ ನನ್ನ ತಂದೆಯ ಬರವಣಿಗೆಯ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ಮತ್ತು ಚಂದ್ರು ವಿಶ್ವಾಸ ಇದ್ದೇವೆ ಎಂದರೆ ಸರಿ.ನನ್ನನ್ನು ಸಾಕ್ಷಿ ನುಡಿಯಲು ಚಂದ್ರು ಕರೆತಂದಿದ್ದಾರೆ ಎಂದರೆ ಸರಿ.ಚಂದ್ರು ಮತ್ತು ನಾನು ವಿಶ್ವಾಸದಿಂದ ಇರುವ ಕಾರಣ ಸೃಷ್ಟಿತ ದಾಖಲಾತಿಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ-

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.ಸ.ಮಾ,

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ

O.S 270/2008
DW-5